# ಅಧಿಕ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಶಿರಾ.

## ಪ್ರಕರಣ ಸಂಖ್ಯೆಃ 36/2026

**ದಿನಾಂಕಃ 26.05.2026** ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಭೋದಿಸಲಾಯಿತು.

| | | | |
|---|---|---|---|
| ಸಿಡಬ್ಲ್ಯೂಃ | 2 | ಪಿಡಬ್ಲ್ಯೂ | 4 |
| ಹೆಸರು | ಆನಂದ್ ಆರ್.ಡಿ. | | |
| ತಂದೆ / ಗಂಡನ ಹೆಸರು | ದೊಡ್ಡಯ್ಯ | | |
| ವಯಸ್ಸು | 52 | | |
| ಉದ್ಯೋಗ | ಹೆಚ್.ಸಿ. | | |
| ವಾಸ | ಶಿರಾ | | |

## ಮುಖ್ಯ ವಿಚಾರಣೆಃ ಎ ಪಿ ಪಿ ರವರಿಂದಃ

ನಾನು 2016 ರಿಂದ 2019 ರ ವರೆಗೆ ತಾವರೆಕೆರೆ ಪೊಲೀಸ್ ಠಾಣೆಯಲ್ಲಿ ಹೆಚ್.ಸಿ. ಆಗಿ ಕರ್ತವ್ಯ ಮಾಡಿರುತ್ತೇನೆ.

2. ದಿಃ14-10-2017 ರಂದು ಮಧ್ಯಾಹ್ನ 1.30 ಗಂಟೆ ಸಮಯದಲ್ಲಿ ಠಾಣ ಕರ್ತವ್ಯದಲ್ಲಿರುವಾಗ ಚಾಸಾ.1 ರವರಿಗೆ ಹುಣಸೆಹಳ್ಳಿ ಗ್ರಾಮದಲ್ಲಿ ಯಾರೋ ಅಕ್ರಮವಾಗಿ ಮಧ್ಯ ಮಾರಾಟ ಮಾಡಿರುವ ಬಗ್ಗೆ ಠಾಣೆಗೆ ಮಾಹಿತಿ ಬಂದಿರುತ್ತದೆ. ಕೂಡಲೆ ಚಾಸಾ.1 ರವರು ಜೊತೆ ನಾನು, ಚಾಸಾ.3 ಪಂಚರಾದ, ಚಾಸಾ.4 ಮತ್ತು 5 ರವರು ಸರ್ಕಾರಿ ಜೀಪಿನಲ್ಲಿ ಹುಣಸೆಹಳ್ಳಿ ಗ್ರಾಮಕ್ಕೆ ಹೋಗಿರುತ್ತೇವೆ. ನಾವು ಹುಣಸೆಹಳ್ಳಿ ಗ್ರಾಮದ ಬಳಿ ಹೋಗಿ ನೋಡುವಾಗ ಹೋಟೆಲ್ ಮುಂಭಾಗ ಒಬ್ಬ ವ್ಯಕ್ತಿ ಗೋಣಿ ಚೀಲದಲ್ಲಿ ಅಕ್ರಮವಾಗಿ ಮಧ್ಯ ಮಾರಾಟ ಮಾಡುತ್ತಿರುವುದು ಕಂಡುಬಂದಿರುತ್ತದೆ. ಕೂಡಲೇ ನಾವು ಹೋಟೆಲ್ ಬಳಿ ಹೋದಾಗ ವ್ಯಕ್ತಿ ಸಮವಸ್ತ್ರದಲ್ಲಿದ್ದ ನಮ್ಮನ್ನು ನೋಡಿ ಓಡಿ ಹೋಗಲು ಪ್ರಯತ್ನಿಸಿದಾಗ ನಾನು ಕೂಡಲೇ ವ್ಯಕ್ತಿಯನ್ನು ಹಿಡಿದುಕೊಂಡಿರುತ್ತೇನೆ. ಸದರಿ ವ್ಯಕ್ತಿಯ ಅಂಗ ಶೋಧನೆ ಮಾಡಿದಾಗ ಶರ್ಟ್ ನ ಜೇಬಿನಲ್ಲಿ ರೂ.50, 20, 10 ಇದ್ದು ಚಾಸಾ.1 ರವರು ಮಧ್ಯ ಮಾರಾಟ ಮಾಡಲು ಪರವಾನಗಿ ಇರುವ ಬಗ್ಗೆ

ಕೇಳಿದಾಗ ಇಲ್ಲ ಎಂದು ಹೇಳಿರುತ್ತಾನೆ. ಚಾಸಾ.1 ರವರು ಬಿಳಿ ಚೀಲವನ್ನು ನಮ್ಮ ಸಮಕ್ಷಮ ಪರಿಶೀಲಿಸಿದಾಗ 90 ML ನ 52 ರಾಜಾ ವಿಸ್ಕಿ ಪ್ಯಾಕೇಟ್ ಗಳು ಇರುವುದನ್ನು ನನ್ನ ಮತ್ತು ಚಾಸಾ.3 ರಿಂದ 5 ರವರ ಸಮಕ್ಷಮ ಅಮಾನತ್ತು ಪಂಚನಾಮೆ ಮೂಲಕ ಮಧ್ಯಾಹ್ನ 2.20 ರಿಂದ 3.30 ರವರೆಗೆ ಮಾಡಿರುತ್ತಾರೆ. ಸದರಿ ಮಧ್ಯದ ಪ್ಯಾಕೇಟುಗಳ ಪೈಕಿ 2 ಪ್ಯಾಕೇಟುಗಳನ್ನು ಮಾದರಿಗಾಗಿ ತೆಗೆದುಕೊಂಡಿರುತ್ತಾರೆ. ಸ್ಥಳದಲ್ಲಿ 2 ಖಾಲಿ ಟೆಟ್ರ ಪ್ಯಾಕೇಟ್ ಮತ್ತು 2 ಖಾಲಿ ನೀರಿನ ಲೋಟವನ್ನು ಸಹ ವಶಕ್ಕೆ ಪಡೆದಿರುತ್ತಾರೆ. ಚಾಸಾ.1 ರವರು ಮಾಡಿದ ಪಂಚನಾಮೆಗೆ ನಾನು ಮತ್ತು ಚಾಸಾ.3 ರಿಂದ 5 ರವರು ಸಹಿ ಮಾಡಿರುತ್ತೇವೆ. ನಂತರ ಚಾಸಾ.1 ರವರು ಆರೋಪಿಯನ್ನು, ಮಧ್ಯದ ವಸ್ತುಗಳನ್ನು ಮತ್ತು ಪಂಚನಾಮೆಯೊಂದಿಗೆ ಠಾಣೆಗೆ ಹೋಗಿ ವರದಿ ಕೊಟ್ಟಿರುತ್ತಾರೆ. ನಾನು ಘಟನೆ ಬಗ್ಗೆ ಚಾಸಾ.6 ರವರಿಗೆ ಹೇಳಿಕೆ ಕೊಟ್ಟಿರುತ್ತೇನೆ.

3. ಸಾಕ್ಷಿಯು ನಿ.ಪಿ.1 ರ ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.1(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮು.ಮಾ.1 ರಿಂದ 5 ಮತ್ತು ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ.ಜಿ.ಎಸ್.ಆರ್. ವಕೀಲರಿಂದಃ</u>**

ನ್ಯಾಯಾಲಯದ ಮುಂದಿರುವ ವಸ್ತು ಪ್ಲಾಸ್ಟಿಕ್ ಚೀಲ ಎಂದರೆ ಸರಿ. ನಾವು ಠಾಣೆಯನ್ನು 1.10 ಕ್ಕೆ ಬಿಟ್ಟು 2.20 ಕ್ಕೆ ಹುಣಸೆಹಳ್ಳಿ ಗ್ರಾಮಕ್ಕೆ ಹೋಗಿರುತ್ತೇವೆ. ಠಾಣೆಯಿಂದ ಹುಣಸೇಹಳ್ಳಿಗೆ 12 ಕಿ.ಮಿ. ಇರುತ್ತದೆ. 12 ಕಿ.ಮಿ. ದೂರವನ್ನು 5 ನಿಮಿಷಕ್ಕೆ ಹೋಗಬಹುದು ಎಂದರೆ ಸರಿಯಲ್ಲ. 12 ಕಿ.ಮಿ. ಗೆ 20-25 ನಿ. ಕ್ಕೆ ಹೋಗಬಹುದು. ಘಟನೆ ದಿನ ಆರೋಪಿ ಯಾವ ಬಟ್ಟೆಯನ್ನು ಹಾಕಿದ್ದನು ಎಂದು ನೆನಪಿಲ್ಲ. ನಾನು ರೂ.50, 20, ಮತ್ತು 10 ರ ಹಣದ ಸಂಖ್ಯೆ ನೋಡಿಲ್ಲ. ರಾಜ ವಿಸ್ಕಿ ಮಧ್ಯದ ಪ್ಯಾಕೇಟ್ ಗಳ ಸಂಖ್ಯೆ ಮತ್ತು ಬ್ಯಾಚ್ ಬರೆದಿಲ್ಲ. ಮಧ್ಯದ ವಸ್ತುಗಳ ಮೇಲೆ 'ಎನ್' ಎಂಬ ಅಕ್ಷರವನ್ನು ನಾನೇ ಬರೆದಿರುತ್ತೇನೆ. ನಿಪಿ-1 ರ ಚೆಕ್ಕುಬಂದಿ ಪೂ-ಆರೋಪಿಯ ಹೋಟೆಲ್, ಪ-ಗ್ರಾಮ ಪಂಚಾಯಿತಿ ಕಟ್ಟಡ ಮತ್ತು ಉ-ದ-ಕ್ಕೆ ಹುಣಸೆಹಳ್ಳಿ-ದಂಡಿಕೆರೆ ರಸ್ತೆ ಇರುತ್ತದೆ. ಗುಡಿಸಿಲಿನಲ್ಲಿಯೇ ಹೋಟೆಲ್ ಆರೋಪಿಗೆ ಸೇರಿದೆ ಎಂದರೆ ಸರಿ. ನನ್ನ ಹೇಳಿಕೆಯನ್ನು ದಿನಾಂಕ ಹಾಲಿ ನೆನಪಿಲ್ಲ. ನಾನು ಹೇಳಿದಂತೆ ಹುಣಸೆಹಳ್ಳಿ ಗ್ರಾಮಕ್ಕೆ ಹೋಗಿ ಆರೋಪಿ ಬಳಿಯಿಂದ

ಮಧ್ಯದ ಪ್ಯಾಕೇಟುಗಳನ್ನು ಅಮಾನತ್ತು ಪಡಿಸಿಕೊಂಡು ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿಯಿಂದ ಹಣ ವಶಕ್ಕೆ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಚಾಸಾ.1 ರವರು ನನ್ನ ಮೇಲಾಧಿಕಾರಿಯಾಗಿರುವ ಕಾರಣ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಅಪರ ಹಿ.ಸಿ.ಜೆ ಮತ್ತು ಜೆ.ಎಮ್.ಎಫ್.ಸಿ.
ಶಿರಾ.